







# ಬೆಣ್ಣೆದೋಸೆ ನಗರದಲ್ಲಿ ಹಳ್ಳಿ ಬದುಕಿನ ಚಿಲಿಪಿಲಿ

**ಗ್ರಾಮೀಣ ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ವಿಶೇಷ ಕಲಾಕೃತಿಗಳ ಥೀಮ್ ಪಾರ್ಕ್ ದಾವಣಗೆರೆಯಲ್ಲಿ ರೂಪುಗೊಂಡಿದೆ.**

**■ ರಘುನಾಥರಾವ್ ತಾಪ್ಸೆ**





ಬೆಣ್ಣೆ ದೋಸೆಗೆ ಪ್ರಸಿದ್ಧವಾಗಿರುವ ದಾವಣಗೆರೆಯಲ್ಲಿ ಕಲಾ ನೈಪುಣ್ಯದಿಂದ, ವಿಶೇಷ ಪರಿಕಲ್ಪನೆಯಿಂದ ಕಣ್ಮನ ಸೆಳೆಯುವ ತಾಣವಾಗಿ ಗುರುತಿಸಿಕೊಂಡಿದೆ ಈ ನೂತನ ಥೀಮ್ ಪಾರ್ಕ್.

ಗ್ರಾಮೀಣ ಕಲೆ, ಸಾಹಿತ್ಯ, ಸಂಸ್ಕೃತಿ, ಗ್ರಾಮೀಣ ಜನರ ಬದುಕು ಬವಣೆ, ದೇಸೀ ಕ್ರೀಡೆಗಳನ್ನು ಬಿಂಬಿಸುವ ಈ ಉದ್ಯಾನ ದೃಶ್ಯಕಲಾ ಮಹಾವಿದ್ಯಾಲಯದ ಒಂದೂವರೆ ಎಕರೆ ಪ್ರದೇಶದಲ್ಲಿ ಮೈದಳೆದಿದೆ.

ವಿಶೇಷ ಸಂದೇಶ ಸಾರುವ ಕಲಾಕೃತಿಗಳು ಇಲ್ಲಿ ಮೇಳೈಸಿದ್ದು, ಜಲ್ಲಿಕಲ್ಲು, ಕಬ್ಬಿಣ, ಸಿಮೆಂಟ್ ಮಾಧ್ಯಮದಲ್ಲಿ ರಚನೆಗೊಂಡ 200ಕ್ಕೂ ಹೆಚ್ಚು ಕಲಾಕೃತಿಗಳು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. 150ಕ್ಕೂ ಹೆಚ್ಚು ಕಲಾವಿದರ ಸತತ ಒಂದು ವರ್ಷ ಶ್ರಮದ ಫಲವಾಗಿ ಉದ್ಯಾನ ರೂಪುಗೊಂಡಿದೆ.

ಚಿಟ್ಟೆಯ ಜೀವನಚಕ್ರ ಬಿಂಬಿಸುವ ಕಲಾಕೃತಿ, ಬುಗುರಿ, ಕುಂಟೆಬಿಲ್ಲೆ, ಗೋಲಿ ಆಟ, ಬಂಡಿ, ಚಿನ್ನಿದಾಂಡು ಆಡುವ ಮಕ್ಕಳ ಕಲಾಕೃತಿಗಳು ಗಮನಸೆಳೆಯುತ್ತವೆ. ಮೊಬೈಲ್ ಮೇಲೆ ಆಡುತ್ತಿರುವ ಮಕ್ಕಳ ಕಲಾಕೃತಿ ತಾಂತ್ರಿಕ ಜಗತ್ತಿನ ಪ್ರಭಾವದ ಕುರಿತ ಸೂಕ್ಷ್ಮ ಸಂದೇಶವೊಂದನ್ನೂ ಸಾರುವಂತಿದೆ. ಉದ್ಯಾನದ ಮತ್ತೊಂದು ಪ್ರಮುಖ ಆಕರ್ಷಣೆ, ಜಾನುವಾರು ಸಂತೆಯಲ್ಲಿ ಎತ್ತು, ಹಸು, ಎಮ್ಮೆಗಳ ವ್ಯಾಪಾರ ಕುದುರಿಸುವ ಗ್ರಾಮೀಣ ಜನರ ಕಲಾಕೃತಿಗಳು. ಹಳ್ಳಿಗಳ ಜಾತ್ರಾ ಮಹೋತ್ಸವದಲ್ಲಿ ರೋಚಕವಾಗಿ ನಡೆಯುವ ಟಗರು ಕಾಳಗ, ಕೋಳಿ ಕಾಳಗ, ಬಾಜಿ ಕಟ್ಟಲು ಪುಳಕಿತರಾದ ಜನರು ಗುಂಪು, ಕುಸ್ತಿ ಪಂದ್ಯಾವಳಿಯಲ್ಲಿ ಅಖಾಡಕ್ಕೆ ಇಳಿದ ಪೈಲ್ವಾನರು, ಮದಗಜದಂತೆ ಎದುರಾಳಿಯನ್ನು ಮಣಿಸಲು ಸೆಣಸಾಡುತ್ತಿರುವ ದೃಶ್ಯಗಳು ಮನಸೆಳೆಯುವಂತಿವೆ.

ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗಾಗಿ ಗ್ರಾಮೀಣ ಜನರ ಅಪ್ಪಿಕೊ ಚಳವಳಿಯ ದೃಶ್ಯಗಳು, ಭಾರತದ ಗ್ರಾಮೀಣ ಕ್ರೀಡೆ ಕಬ್ಬಡಿ ಪಂದ್ಯಾವಳಿಯ ನೋಟ, ವಿವಿಧ ಯೋಗ ಮುದ್ರೆಗಳು, ಮಗುವಿಗೆ ತಾಯಿಯೇ ಮೊದಲ ಗುರು ಎಂದು ಸಾರುವ ವರ್ಣ ಕಲಾಕೃತಿ, ಆಧುನಿಕ ಭರಾಟೆಯಲ್ಲಿ ತೆರೆಯ ಅಂಚಿಗೆ ಸರಿದಿರುವ ದೊಡ್ಡಾಟ, ಹುಲಿ ಕುಣಿತ, ತಮಟೆ ವಾದನ, ಸೂತ್ರದ ಬೊಂಬೆಯಾಟ, ಗೊಂದಲಿಗರು, ಜನಪದ ಹಾಡುಗಾರರು, ಜೋಗತಿ ಯಲ್ಲಮ್ಮ, ಲಂಬಾಣಿ ನೃತ್ಯದ ಕಲಾಕೃತಿಗಳು ಒಂದಕ್ಕಿಂತ ಒಂದು ಸುಂದರವಾಗಿವೆ.

ದಾವಣಗೆರೆ ನಗರದೇವತೆ ದುಗ್ಗಮ್ಮನ ಜಾತ್ರೆ ವೇಳೆ ದೇವಿ ಪೂಜೆಗೆ ಹೊರಡುವ ಮೆರವಣಿಗೆ, ಕುಂಭ ಹೊತ್ತ ಮಹಿಳೆಯರು, ದೀಡ್ ನಮಸ್ಕಾರ ಹಾಕುತ್ತಿರುವ ಭಕ್ತರ ಕಲಾಕೃತಿಗಳೂ ವಿಶಿಷ್ಟವೆಂದೇ ಹೇಳಬಹುದು.

ಸ್ಮಾರ್ಟ್ ಸಿಟಿ ಯೋಜನೆಯಡಿ ಒಂದೂವರೆ ಎಕರೆಯಲ್ಲಿ ಸುಮಾರು ₹ 6 ಕೋಟಿ ವೆಚ್ಚದಲ್ಲಿ ಈ ಥೀಮ್ ಪಾರ್ಕ್ ರೂಪುಗೊಂಡಿದೆ. ಅಭಿವೃದ್ಧಿಯ ರೆಕ್ಕೆಪುಕ್ಕಗಳೊಂದಿಗೆ ಸ್ಮಾರ್ಟ್ ಸಿಟಿಯಾಗಿ ಮೇಲೇಳುತ್ತಿರುವ ಕುಂದವಾಡ ಕೆರೆ, ಗ್ಲಾಸ್ ಹೌಸ್‌ನೊಂದಿಗೆ ಥೀಮ್ ಪಾರ್ಕ್ ಹೊಸ ಪ್ರವಾಸಿತಾಣವಾಗಿ ಸೇರ್ಪಡೆಯಾಗಿದೆ.

ಪ್ರತಿಕ್ರಿಯಿಸಿ: feedback@sudha.co.in

